188(2)

CONQUER
GENERAL
SEXUAL
DEBILITIES
WITH
SHAKTI
SUDHA

Reg No. M 1299 (Founded 1917) Daily & Weekly

ಸತ್ಯವಾದಿ
SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 28 ಸಂಚಿಕೆ. 126] ಸೋಮವಾರ 8—2—45 [3 ಪೈ

ಚಿನ್ನ, ಬೆಳ್ಳಿ, ವಡವೆಗಳು,
ಅಮಶಂಖೆಗೆ ಖಾತ್ರಿ ಗುಣಕಾರಿ
ಡಿ ಸೆಂಟಿ ಸೈಡ್
ಮತ್ತು
ಝೂಂಡ ಕಂಪೆನಿಯ ಔಷಧಿಗಳು
ಬೇಕಾದರೆ
ಕಾಂತರಾಜ್ & ಕೋ
ರವೆ ಬೀದಿ, ಮೈಸೂರು.

5 ಲಕ್ಷ ರೂ. ದಾನ

ವೈಸರಾಯರ ಯುದ್ಧನಿಧಿಗೆ ಶ್ರೀ ಮನ್ಮಹಾರಾಜರವರು, ವೈಸರಾಯರೇ ವಲ್ಲರು ರಾಜಧಾನಿಗೆ ಬಂದ ಜ್ಞಾಪಕಾರ್ಥವಾಗಿ ದಯಮಾಲಿಸಿರುತ್ತಾರೆ.

ಕಲ್ಕತ್ತಾದಲ್ಲಿ ಪಡುಬಿನ ಉಪದ್ರವವನ್ನು ಶಮನ ಮಾಡಲು 5 ಲಕ್ಷ ಜನರಿಗೆ ದೇವಿಹಾಕಿದಮೇಲೆ ಉಪಯೋಗಿಸಿದ ಹಾಲು ಒಳ್ಳೆದಲ್ಲವೆಂದು ತಿಳಿದು ಬಂದಿತು. ಮತ್ತೆ ಇವರಿಗೆ ದೇವಿ ಹಾಕಲಾಗುತ್ತೆ.

ನ್ಯಾಯಸ್ಥಾನದಲ್ಲಿ ಇನ್ನು ಮುಂದೆ ಶ್ರೀ ಜಯ ಪ್ರಕಾಶನಾರಾಯಣರ ಹೀಬಸ್ ಕಾರ್ಪಸ್ ಮೊಖದ್ದಮೆ ವಿಷಯ ಪ್ರಕಟಿಸಬಾರದೆಂದು ಕೇಂದ್ರ ಸರಕಾರದ ಆಜ್ಞೆಯಾಗಿದೆ.

ಕಾಂಗ್ರೆಸ್ ಬಾವುಟವು ದೆಹಲಿಯ ನ್ಯಾಯಸ್ಥಾನದ ಧೂಳು ಹೊಡೆಯಲು ಉಪಯೋಗಿಸುತ್ತಿರುವರಂತೆ.

ಇಥೋಪಿಯಾದಲ್ಲಿ ಅಮೆರಿಕ ರಾಯಭಾರಿಯನ್ನಿಡಲು ನಿಶ್ಚಯ ಮಾಡಲಾಗಿದೆ.

1964 ರಲ್ಲಿ ಸೂಯಿಜ್ ಕಾಲುವೆಯನ್ನು ಈಜಿಪ್ಟಿಗೆ ಬಿಟ್ಟುಕೊಡಬೇಕಾದ್ದರಿಂದ ಬ್ರಿಟಿಷರು ತಾವೇ ಬೇರೊಂದು ಕಾಲುವೆಯನ್ನು ತಯಾರ್ಮಾಡುತ್ತಾರೆಂದು ಹೇಳಲಾಗಿದೆ.

ಭಾರತೀಯರನ್ನು ಸಂಯುಕ್ತ ಅಮೇರಿಕಾಕ್ಕೆ ಸೇರಿಸಲು ಮಸೂದೆಯು ಈಗ ಸೆನೇಟು ಮುಂದಿದೆ.

ಷಿಯಾ ಸುನ್ನಿ ಹೊಡೆದಾಟ

ಲಕ್ನೋದಲ್ಲಿ ಮುಸ್ಲಿಮರ ಸುನ್ನಿ ಷಿಯಾ ಪಂಗಡಗಳಿಗೆ ಜಗಳವಾಗಿ ಕಲ್ಲು ಹೆಂಟಿಗಳನ್ನು ಒಬ್ಬರಿಗೊಬ್ಬರು ಧಾರಾಳವಾಗಿ ಎಸೆದಾಡಿದರು. ಪಾಕಿಸ್ತಾನ್ ಜಿನ್ನರು ಇತ್ತ ಗಮನಿಸುವರೇ?

ಂ ಂ

ಇಂಡಿಯನ್ ಎಕ್ಸ್‌ಪ್ರೆಸ್ಸಿನ ಜಾಯಿಂಟ್ ಎಡಿಟರಾದ ಶ್ರೀ ಖಾಸಾ ಸುಬ್ಬರಾಯರು ಮುಂದೆ ಬಾರತೀಯ ವೃತ್ತ ಪತ್ರಿಕೆಗಳಿಗೆ ಬಹಳ ಅನಾನುಕೂಲ ಒದಗುತ್ತದೆಂದು ಮದರಾಸಿನಲ್ಲಿ ಹೇಳಿದರು.

ಂ ಂ

ಜಪಶೆನೀಯರು ಕ್ವಾದ್‌ಟಾಂಗಿನಲ್ಲಿ ಮತ್ತೆ ಚೀನೀಯರ ವಿಮಾನನಿಲ್ದಾಣ ಒಂದನ್ನು ವಶಪಡಿಸಿಕೊಂಡರು.

ಂ ಂ

ಭಾರತದಲ್ಲಿ ಪ್ರಾಚೀನ ಶಾಸ್ತ್ರವನ್ನು ಅಬಿವೃದ್ಧಿ ಪಡಿಸಲು ಅನೇಕ ಮಂದ ಐರೋಪ್ಯರನ್ನು ಕರೆತರಿಸುವರು. ಇವರಲ್ಲಿ ಬಂಗಾಳಾ ಗೌರ್ನರರ ಸಹೋದರರಾದ ನಿ| ಕೇಸಿ ಎಂಬುವವರೊಬ್ಬರು.

ಂ ಂ

ಬ್ರಿಟನಿನ ಅತ್ಯಂತ ದೊಡ್ಡಡಾದ ನೌಕಾ ವಿಮಾನ ನಿಲ್ದಾಣವು ಈಗ ಶಾಂತಿ ಸಾಗರದಲ್ಲಿ ಕೆಲಸ ಮಾಡುತ್ತಿದೆ, ಇದರ ತೂಕ 30 ಸಾವಿರ ಟನ್. ಅದರಲ್ಲಿ ಕೆಲಸ ಮಾಡುವವರ ಸಂಖ್ಯೆ 2000 ಕ್ಕೆ ವಿುಾರದೆ.

ಂ ಂ

ಅಲ್ಜಾಬಕ್ಕ್ ಖೂನಿ ಮೊಖದ್ದಮೆಯಲ್ಲಿ ಎಲ್ಲ ಅಪರಾಧಿಗಳನ್ನೂ ಸೆಷನ್ಸಿಗೆ ಕಮಿಟ್ ಮಾಡಲಾಗಿದೆ.

ಸ್ಪಾಲಿಕ್ ಇಸ್ಪರಲ್ಲೇ ರೋಸ್ ಕರ್ಗಾವಿಚ್ ಎಂಬಾತಕೆಯನ್ನು ಲಗ್ನವಾಗುವರೆಂದು ರಷ್ಯಕ ವಾರ್ತೆ ತಿಳಿಸುತ್ತದೆ.

ಈ ವಾರದಿಂದ ವಾರಕ್ಕೊಂದಾವರ್ತಿ ವಿಮಾನ ಟಪಾಲು ಇಂಡಿಯಾ ಮುಖೇನ ಇಂಗ್ಲೆಂಡ್ ಆಸ್ಟ್ರೇಯಾಕ್ಕೆ ನಡೆಸಲು ಏರ್ಪಾಡಾಗಿದೆ.

ತ್ರಿಮೂರ್ತಿಗಳ ಸಮ್ಮೇಳನವು ಗುಪ್ತವಾಗಿ ಕಪ್ಪು ಸಮುದ್ರದ ತೀರದಲ್ಲಿ ಒಂದು ಕಡೆ ನಡೆಯುತ್ತಿರುವುದಾಗಿ ಊಹಿಸಲಾಗಿದೆ

ಕೌನ್ಸಿಲ್ ಆಫ್ ಸ್ಟೇಟ್ ಉಪಚುನಾವಣೆಯಲ್ಲಿ ಮದರಾಸಿನ ಕಾಂಗ್ರೆಸ್ ಉಮೇದುವಾರರಾದ ಶ್ರೀ ತಿರುಮಲರಾಯನಿಗೆ 2073 ಓಟು ಬಂದು ವಿಜಯಿಯಾದರು. ಇವರ ಎದುರಾಳಿಗಳಾಗಿದ್ದ 6 ಮಂದಿ ಪೈಕಿ 4 ಮಂದಿಗೆ ಕಡಿಮೆ ಬಂದುದರಿಂದ ಅವರು ಠೇವಣಾತಿ ಹಣವನ್ನು ಕಳೆದುಕೊಂಡರು.

ಈಜಿಪ್ಟಿನ ಮಾಜಿ ಮತ್ತು ಈಗಿನ ಪ್ರಧಾನ ಮಂತ್ರಿಗಳು ನಮ್ಮ ದೇಶದಲ್ಲಿ ಪರಕೀಯ ವಿಮಾನ ನಿಲ್ದಾಣಗಳು ಇರಲು ಒಪ್ಪುವುದಿಲ್ಲವೆಂದರು. ಈಗಿನ ಪ್ರಧಾನರು ಅಮೆರಿಕಾವು ತಮ್ಮನ್ನು ಕೇಳದೆ ಮುಂಬೆ ಪಂಚದ ವಿಮಾನ ಸಂಸ್ಥೆಯ 500 ವಿಮಾನ ನಿಲ್ಲಲು ಈಜಿಪ್ಟಿನಲ್ಲಿ ಏರ್ಪಾಡು ಮಾಡುವುದಾಗಿ ಹೇಳಿದ್ದು ತಮ್ಮನ್ನು ಕೇಳದೆ ಮಾಡಿದ ರೆಂದೂ ಅದಕ್ಕೆ ತಾವು ಒಪ್ಪುವುದಿಲ್ಲವೆಂದೂ ಹೇಳಿದರು.

ಫ್ಯೂನಿಲಾ ಉರಿಯುತ್ತಿದೆ

ಮಾನಿಲಾ ನಗರವನ್ನು ಜಪಾನೀಯರು ಪೆಟ್ರೋಲು ಹಾಕಿ ಸುಡುತ್ತಿರುವರು.

ಂ ಂ

ಬರ್ಮಾರಸ್ತೆಯಲ್ಲಿ ವಿುತ್ರರು

ಐರಾವತಿ ನದಿ ಪ್ರದೇಶದಲ್ಲಿ ಜಪಾನಿಗಳನ್ನು ಓಡಿಸಲಾಗಿದೆ. ಬರ್ಮಾರಸ್ತೆಯಲ್ಲಿ 80 ಮೈ ವಿುತ್ರರ ವಶಕ್ಕೆ ಬಂದಿದೆ.

ಂ ಂ

ಷರತ್ತಿನ ಬಗ್ಗೆ ಚರ್ಚೆ

ಜರ್ಮನಿಗೆ ವಿಧಿಸಬೇಕಾದ ಷರತ್ತನ್ನು ವಿು॥ ಚರ್ಚಿಲ್ಲರು ಚರ್ಚಿಸುತ್ತಲಿರುವರು.

ಂ ಂ

ಫ್ರೆಂಚ್, ಅಮೇರಿಕನ್ನರ ಸಾಹಸ

ದಕ್ಷಿಣ ಅಲೆಸಾಸ್‌ನಲ್ಲಿ ಫ್ರೆಂಚರು ಮುಖ್ಯ ಮಾರ್ಗಾನುಕೂಲವನ್ನು ಹಿಡಿದರು.

ಂ ಂ

ರಷ್ಯನ್ನರ ಮುಂದೋಟ.

ರಷ್ಯನರು ಓಡರ್ ನದಿ ದಾಟಿ 12 ಧಾಳಿ ನಡೆಸುತ್ತಿರುವರು.

ಂ ಂ

ಹಿಟ್ಲರಿನ ಮೂರ್ಖತನ

ಬ್ಯಾಂಬರ್ಗಿನ ಪತನಕ್ಕಾಗಿ ಹಿಟ್ಲರು ಜರ್ಮನ್ ಮಿಲಿಟರಿ ಅಧಿಕಾರಿಗಳನ್ನು ವಿಚಾರಣೆಗೆ ಗುರಿಮಾಡಿದ್ದಾನೆ.

ನಿಮ್ಮ ಓಟನ್ನು

ಸರಿಯಾದ ಉಮೇದುವಾರನಿಗೆ ಕೊಡಿ

ತ್ರಿವೇಣಿಗಳ ಸಮಾಲೋಚನೆ

ಈಗ ನಡೆಯುತ್ತಿರುವ ತ್ರಿವೇಣಿಗಳ ಸಮ್ಮೇಳನದಲ್ಲಿ ಈ ಪ್ರಕಾರ ಜರ್ಮನಿ ವಿಷಯದಲ್ಲಿ ಕರಾರು ಮಾಡುವರೆಂದು ತಿಳಿಯಬಂದಿತ್ತು:—

1 ಜರ್ಮನಿ ಶಿಸ್ತುಬದ್ಧಿತ ವಾಗುವ ರೀತಿ.

2 ಜರ್ಮನ್ ಗಡಿ ವ್ಯವಸ್ಥೆ.

3 ಜರ್ಮನಿಗೆಹೆಚ್ಚು ಕಾಲದಲ್ಲಿ ಮಾಡಬೇಕಾದ ಕಾರ್ಯ.

4 ಸಮ್ಮೇಳನದಲ್ಲಿ ಫ್ರೆಂಚರು ಸೇರಬಹುದೇ ?

5 ಕಮ್ಯುನ್ನರು ಜರ್ಮನ್ ಮೇಲೆಯುದ್ಧ ಹೂಡುವ ಪ್ರಶ್ನೆ.

6 ಡುಂಬಾರ್ಟನ್‌ಓಕ್ಸ್‌ನಲ್ಲಿ ನಡೆದ ವಿಷಯದಲ್ಲಿ ಚರ್ಚೆ.

7 ಪೋಲೆಂಡಿನ ಮುಂದಿನ ಅಡಚಣೆ.

8 ಡಯುಗೋಸ್ಲೇವಿಯ ಸ್ಥಿತಿಗಳು.

9 ಹಣಕಾಸಿನ ವಿಷಯಗಳು.

ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಬ್ರಿಟಿಷ್ ಸೇನೆಯಲ್ಲಿ ಸೇರಿದ್ದಕ್ಕೆ ಅಂಥವರಿಗೆ ಮುಂದೆ ಎಲ್ಲಾ ವಿಷಯಲ್ಲೂ ಅನುಕೂಲ ಪಡಿಸುವುದಾಗಿ ಸಂಸ್ಥಾನ ಅಜ್ಞೆಯಾಗಿದೆ.

ವೈಸರಾಯರು

ರಾಜಧಾನಿಯಲ್ಲಿ ನಿನ್ನೆ ಮಧ್ಯಾಹ್ನ ೩ ॥ ಗಂಟೆ ಸಮಾರಂಭದಲ್ಲಿ ಅತಿಮಸೆಯಲ್ಲಿ ವೈಸರಾಯರು ಒಂದು ದರ್ಬಾರು ನಡೆಯಿಸಿ ಶ್ರೀಮನ್ಮಹಾರಾಜರಿಗೆ ಜಿ. ಸಿ. ಎಸ್. ಐ. ಪ್ರಶಸ್ತಿಯನ್ನು ದಯಪಾಲಿಸಿದರು.

ಹಿಶಬೋಧನೆ

ವಿದ್ಯಾರ್ಥಿಗಳು ಕೇವಲ ತಮ್ಮ ಪುಸ್ತಕ ಜ್ಞಾನದಿಂದ ಏನನ್ನೂ ಸಾಧಿಸಲಾರರು. ಸರನೇಶ ಪ್ರವಾಸ ಮಾಡಬೇಕು. ಗುಮಾಸ್ತೆ ಕೆಲಸಕ್ಕೆ ಸೇರಬೇಡಿ. ಸಾಹಸಗಳಾಗಬೇಕು. ಇದು ಕೈಗಾರಿಕೆಯುಗ. ಈಗಿನಿಂದಲೂ ನಿಮ್ಮ ಜವಾಬ್ದಾರಿ ಹೊಂದಲು ಕಲಿಯಬೇಕು ಹೀಗೆಂದು ಶ್ರೀ ಜಿ, ಎ ಆಚಾರ್ಯರು ಬೆಂಗಳೂರು ನ್ಯಾಷನಲ್ ಹೈಸ್ಕೂಲು ಹಿರಿಯ ವಿದ್ಯಾರ್ಥಿಗಳ ಸಂಘದ ವಾರ್ಷಿಕ ಸಭೆಯಲ್ಲಿ ಮಾಡಿದ ಅಧ್ಯಕ್ಷ ಭಾಷಣದಲ್ಲಿ ತಿಳಿಸಿದರು.

ಕಳೆದ ಭಾನುವಾರ ಚಾಮುಂಡಿಪುರಂ ನಗರದ ಮಾಧ್ಯಮಿಕ ಶಾಲಾ ವಾರ್ಷಿಕೋತ್ಸವವು ಕಾಲೋಚಿತ ಅಮಲ್ದಾರರ ಅಭ್ಯಕ್ಷತೆಯಲ್ಲಿ ಜರುಗಿತು. ಬಾಲಕರು ಎರಡು ನಾಟಕಗಳನ್ನು ಅಭಿನಯಿಸಿ ಪ್ರೇಕ್ಷಕರನ್ನು ಆನಂದಗೊಳಿಸಿದರು.

ಶುದ್ಧವಾದುದೆಂದು ಗ್ಯಾರಂಟಿ ಯೂಪ ಅಪರಿಶುದ್ಧವಾದ ಪದಾರ್ಥ ಮಿಶ್ರವಾಗಿಲ್ಲ. ದೇವಸ್ಥಾನಗಳಲ್ಲೂ, ಪೂಜಾಕಾರ್ಯಕ್ಕೂ, ಔಷಧಗಳಿಗೂ, ಆಹಾರಗಳಿಗೂ, ಶುಭ ಸಂತೋಷ ಕಾರ್ಯಗಳಲ್ಲಿಯೂ ಉಪಯೋಗಿಸಲರ್ಹವಾಗಿದೆ.

.... ಶ್ರೀ ಓಂ ಬ್ರಾಂಡ್ ಕೇಸರಿ ....

ಕೇಸರಿಯನ್ನು ಗಿರಾಕಿಗಳ ಅನುಕೂಲಕ್ಕಾಗಿ 1 ತೊಲ, 5 ತೊಲ, 1 ಪೌಂಡ್ ಅಥವ ಹೆಚ್ಚಾಗಿ ಬಿಕರಿಗೆ ಇಡಲಾಗಿದೆ.

ಸಾವರಿನ್ ಬ್ರಾಂಡ್

ಓಂ ಬ್ರಾಂಡ್ ಕೇಸರಿಯ ಪುಡಿಯನ್ನು ಕಾಲು ತೊಲ, ಅರ್ಧ ತೊಲ, ಒಂದು ತೊಲ, ಐದು ತೊಲ ಮತ್ತು ಒಂದು ಪೌಂಡುಗಳಲ್ಲಿ ಬಿಕರಿಗೆ ಏರ್ಪಾಡಾಗಿದೆ

ಅಲ್ಲದೆ ಪುಡಿ ಮತ್ತು ಮಿಶ್ರ ಕೇಸರಿಯನ್ನು 16|1 ತೊಲ, 8|1 ತೊಲ, 4|1 ತೊಲ, ಅರ್ಧ ತೊಲ, ಒಂದು ತೊಲ ಐದು ತೊಲ ಮತ್ತು ಚಿಲ್ಲರೆಯಾಗಿಯೂ ಬಿಕರಿಗೆ ಇಟ್ಟಿದೆ. ಇವು ಹೊಟೆಲ್ ಉಪಯೋಗಕ್ಕೆ ಉಪಯುಕ್ತವಾದುದು. ಒಂದು ಸಲ ಉಪಯೋಗಿಸಿದರೆ ನಮ್ಮ ಕೇಸರಿಯ ಮಹತ್ವ ತಿಳಿಯುವುದು.

ಎಲ್ಲಾ ವರ್ತಕರು ಈ ಕೇಸರಿಯನ್ನು ಮಾರುವರು. ಮತ್ತು —

ವಲ್ಲಭದಾಸ್ ತೇಜ್ ಪಾಲ್ ಹಿಂಗು, ಕೇಸರಿ, ಪಚ್ಚಕರ್ಪೂರ ವರ್ತಕರು

೫೫ ಗೋವಿಂದಪ್ಪ ನಾಯಕ'ಬೀದಿ ಜಿ.ಟಿ ಮದರಾ '.

ಮೈಸೂರು ರಣಜಿತ್ ಟಾಕೀಸಿನಲ್ಲಿ 4 ನೇ ವಾರ

At Ranjit ತಕದಿರ್

(ಹಿಂದಿ)

ಚಂದ್ರಮೋಹನ್ — ಮೋತಿಲಾಲ್ — ನಗೀನ್ಸ್ ಬಾರ್ಲಿ

ಮುಂತಾದವರು ಪಾತ್ರವಹಿಸಿರುವರು

— ದಿನವಹಿ ಮೂರು ಆಟಗಳು —

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

ಶಕ್ತಿಸುಧಾ, ೧೦೬೬ ಚಾಮರಾಜಪುರಂ ಮೈಸೂರು.

ಅಪೆರಾ ಟಾಕೀಸ್

ದೇವಕನ್ಯ

ಹೊನ್ನಪ್ಪ ಭಾಗವತರ್, ಯು. ಆರ್. ಜೀವರತ್ನಂ, ಟಿ ಆರ್ ರಾಜಲಕ್ಷ್ಮಿ ಮುಂತಾದವರು ಪಾತ್ರವಹಿಸಿರುವರು.

ಪ್ರತಿದಿನ 3 ಆಟಗಳು

— ಶೀಘ್ರದಲ್ಲೇ ಬರುತ್ತಿದೆ —

ವೈ. ವಿ. ರಾವ್, ಕಮಲಾ ಕೊಟ್ನಿಸ್, ಭಾನುಮತಿ, ನಾರಾಯಣರಾವ್ ಪಾತ್ರವಹಿಸಿರುವ

ತಹಸಿಲ್ದಾರ್

(ತೆಲುಗು ಚಿತ್ರ)

ಅಂದವಾದ ಹೊಲಿಗೆಗೆ ರೆಡಿಮೇಡ್ ಬಟ್ಟೆಗೆ

— ನಮ್ಮಲ್ಲಿ ಬನ್ನಿ —

ಶ್ರೀ ಮಹಾಲಕ್ಷ್ಮಿ ಹಾಲ್

ಸಯ್ಯಾಜಿರಾವ್ ರಸ್ತೆ, ಮೈಸೂರು

ಸತ್ಯವಾದಿ

— ವಾರದ ಸಂಚಿಕೆ —

ಪರದೇಶಕ್ಕೆ ವಾರ್ಷಿಕ ಚಂದಾ

ಅಂಚೆಖರ್ಚು ಸೇರಿ ರೂ. 1—12—0

ಚಿನ್ನಾ ಬೆಳ್ಳಿ ಧಾರಣೆ

ಸವರ್ 1 ಕ್ಕೆ	ರೂ. 71-4-0
ಚಿನ್ನ ತೊಲ 1 ಕ್ಕೆ	49-14-0
ಬೆಳ್ಳಿ "	1-4-0

Edited, Printed and published by M. S. Krishna Rao, at the Satvavadi Press, Chamaraja Agrahar, Mysore